ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (403)207
ಸದಸ್ಯರ ಹೆಸರು : ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ) ಮಾನ್ಯ ಮುಖ್ಯಮಂತ್ರಿಗಳು

ಅ) ಐತಿಹಾಸಿಕ ಸ್ಮಾರಕಗಳನ್ನು ವಿಶ್ವಪರಂಪರೆ ಯುನೆಸ್ಕೋ (UNESCO) ಪಟ್ಟಿಯಲ್ಲಿ ಸೇರಿಸಲು ಸರ್ಕಾರವು ಅನುಸರಿಸುವ ಮಾನವದಂಡಗಳು ಯಾವುವು;

ಐತಿಹಾಸಿಕ ಸ್ಮಾರಕಗಳನ್ನು ವಿಶ್ವಪರಂಪರೆ ಯುನೆಸ್ಕೋ (UNESCO) ಪಟ್ಟಿಯಲ್ಲಿ ಸೇರಿಸಲು ಮಾನವದಂಡಗಳನ್ನು ಸರ್ಕಾರವು ರಚಿಸುವುದಿಲ್ಲ. ಆದಾಗ್ಯೂ ವಿಶ್ವದ ಗಮನ ಸೆಳೆಯುವ ಅಪೂರ್ವ ವಾಸ್ತುಶಿಲ್ಪ ಕಲೆ, ರಚನೆ, ಶಿಲ್ಪ, ಶೈಲಿ ಇವುಗಳನ್ನು ಹೊಂದಿರುವ ಪುರಾತನ ಸ್ಮಾರಕಗಳು ವಿಶ್ವಪರಂಪರೆ ಪಟ್ಟಿಯಲ್ಲಿ (UNESCO) ಸೇರ್ಪಡೆ ಪಡೆಯಲು ಅರ್ಹತೆ ಹೊಂದಿರುತ್ತದೆ.

ಆ) ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳನ್ನು ವಿಶ್ವ ಪರಂಪರೆ ಪಟ್ಟಿಯಲ್ಲಿ (UNESCO) ಸೇರಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ;

ರಾಜ್ಯ ಸರ್ಕಾರವು ಈ ಕೆಳಕಂಡ ಸ್ಮಾರಕ/ಪ್ರದೇಶಗಳನ್ನು ವಿಶ್ವ ಪರಂಪರೆ ಪಟ್ಟಿಯಲ್ಲಿ (UNESCO) ಸೇರ್ಪಡೆ ಮಾಡಲು ಕೇಂದ್ರ ಸರ್ಕಾರದೊಡನೆ ಪ್ರಸ್ತಾಪಿಸಿರುತ್ತದೆ.

1. ಬೃಹತ್ ಶಿಲಾ ಸಮಾಧಿ ರಚನಾ ಸಂಕೀರ್ಣ (ಹಿರೇಬೆಸ್ಕಲ್‌ನಲ್ಲಿರುವ (ಕೊಪ್ಪಳ ಜಿಲ್ಲೆ) ಒಂದು ಇತಿಹಾಸ ಪೂರ್ವ ನಿವೇಶನ)
2. ಲಕ್ಕುಂಡಿ ಮತ್ತು ಡಂಬಾಲ್ (ಗದಗ ಜಿಲ್ಲೆ) ನಲ್ಲಿರುವ ತರುವಾಯ ಚಾಲುಕ್ಯ ವಾಸ್ತುಶಿಲ್ಪ.
3. ಗುಲ್ಬರ್ಗಾದಲ್ಲಿನ ಇಂಡೋ-ಇಸ್ಲಾಮಿಕ್ ವಾಸ್ತುಶಿಲ್ಪ.
4. ಬೀದರ್‌ನಲ್ಲಿರುವ ಇಂಡೋ-ಇಸ್ಲಾಮಿಕ್ ವಾಸ್ತುಶಿಲ್ಪ ಸ್ಪಷ್ಟತೆಗಳು.
5. ಬಿಜಾಪುರದಲ್ಲಿರುವ ಇಂಡೋ-ಇಸ್ಲಾಮಿಕ್ ವಾಸ್ತುಶಿಲ್ಪ ಸ್ಪಷ್ಟತೆಗಳು.

ಇ) ವಿಜಾಪುರದಲ್ಲಿರುವ ವಿಶ್ವವಿಖ್ಯಾತ ಗೋಳಗುಮ್ಮಟವನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಉದ್ದೇಶಿಸಿದೆಯೆ;

ಹೌದು.

ಈ) ಇಲ್ಲವಾದರೆ ಸೇರಿಸದಿರಲು ಅಡಚಣೆಗಳೇನು;

ಉದ್ಭವಿಸುವುದಿಲ್ಲ.

ಉ) ಇದನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ರಾಜ್ಯ ಸರ್ಕಾರದ ವತಿಯಿಂದ ಮಹಾ ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣ, ನವದೆಹಲಿ ಇವರಿಗೆ ಈ ಬಗ್ಗೆ ಶಿಫಾರಸ್ಸು ಮಾಡಲಾಗಿದೆ.

ಊ) ವಿಶ್ವವಿಖ್ಯಾತ ಗೋಳಗುಮ್ಮಟದ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ವಿಶ್ವವಿಖ್ಯಾತ ಗೋಳಗುಮ್ಮಟದ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಈ ಮುಂದಿನಂತೆ ಕ್ರಮ ಕೈಗೊಳ್ಳಲಾಗಿದೆ:

1. ಗೋಳಗುಮ್ಮಟಕ್ಕೆ ಹೊನಲು ಬೆಳಕಿನ ಸೌಲಭ್ಯವನ್ನು ಕಲ್ಪಿಸಲಾಗಿದ್ದು ಇದನ್ನು ನವೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
2. ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ.
3. ಸದರಿ ಸ್ಮಾರಕದ ಬಗ್ಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (404)208
ಮಾನ್ಯ ಸದಸ್ಯರ ಹೆಸರು : ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ)
ಉತ್ತರಿಸುವ ಸಚಿವರು : (ಸಿ.ಎಂ. ಉದಾಸಿ) ಮಾನ್ಯ ಲೋಕೋಪಯೋಗಿ ಸಚಿವರು

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ವಿವಿಧ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಮಂಜೂರಾಗಿರುವ ಸೇತುವೆಗಳು ಹಾಗೂ ಅವುಗಳ ಮೊತ್ತವೆಷ್ಟು;

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ವಿವಿಧ ಹಂತಗಳಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 4 ಸೇತುವೆಗಳು ಮಂಜೂರಾಗಿದ್ದು, ಅವುಗಳ ವಿವರ ಈ ಕೆಳಗಿನಂತಿವೆ.

ಹಂತ	ಮಂಜೂರಾದ ಸೇತುವೆಗಳ ಸಂಖ್ಯೆ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
2ನೇ ಹಂತ	2	70.00
3ನೇ ಹಂತ	1	60.00
4ನೇ ಹಂತ	1	150.00
ಒಟ್ಟು	**4**	**280.00**

ಆ) ಮಂಜೂರಾತಿ ನೀಡಿರುವ ಸೇತುವೆಗಳು ಪೂರ್ಣಗೊಂಡಿರುತ್ತವೆಯೇ;